

ಡಯಾಬಿಟಿಸ್ ಬಗ್ಗೆ ತಿಳಿವಳಿಕೆ ಇದ್ದಷ್ಟೇ ಗೊಂದಲಗಳೂ ಇವೆ. ದಿನೇ ದಿನೇ ಡಯಾಬಿಟಿಸ್ ರೋಗಿಗಳ ಸಂಖ್ಯೆ ಹೆಚ್ಚುತ್ತಲೇ ಇರುವುದಕ್ಕೆ ಈ ಗೊಂದಲಗಳ ಕೊಡುಗೆಯೂ ಸಾಕಷ್ಟಿದೆ. ಒಮ್ಮೆ ಅಡರಿಕೊಂಡರೆ ಮಧುಮೇಹದಿಂದ ಪಾರಾಗಲು ಸಾಧ್ಯವೇ ಇಲ್ಲ ಎಂಬ ನಂಬಿಕೆ ಬಹುತೇಕರಲ್ಲಿದೆ. ಆ ಮಾತು ಎಷ್ಟು ನಿಜ? ಮಾತ್ರೆಗಳು, ಇನ್ಸುಲಿನ್‌ಗಳ ಜಾಲದಲ್ಲಿ ಒಮ್ಮೆ ಸಿಕ್ಕಿಹಾಕಿಕೊಂಡರೆ ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲವೇ? ಸಾಧ್ಯವಿದೆ ಎನ್ನುತ್ತಾರೆ ಡಯಾಬಿಟಿಸ್ 'ರಿವರ್ಸಲ್' ಪ್ರತಿಪಾದಕರು. ಮಧುಮೇಹ ಕಾಯಿಲೆಯನ್ನು ಹೆಗಲ ಮೇಲೆ ಹೊತ್ತಿರುವವರಿಗಂತೂ ಇದು ಶುಗರ್‌ಲೆಸ್ ಸಿಹಿಸುದ್ದಿ! ಇತ್ತೀಚೆಗೆ ಸಾಕಷ್ಟು ವೇಗವಾಗಿ ಪ್ರವರ್ಧಮಾನಕ್ಕೆ ಬರುತ್ತಿರುವ 'ರಿವರ್ಸಲ್' ಚಿಕಿತ್ಸಾ ವಿಧಾನದ ಕುರಿತು ಪರಿಚಯಾತ್ಮಕ ಲೇಖನ ಈ ವಾರದ ಸುಧಾ ವಿಶೇಷ.


**■ ಡಾ. ವಾಸು ಎಚ್.ವಿ.**

ಲೇಖಕರು ಸ್ವತಃ ಡಯಾಬಿಟಿಸ್ 'ರಿವರ್ಸಲ್' ಚಿಕಿತ್ಸೆಯಲ್ಲಿ ತೊಡಗಿರುವ ವೈದ್ಯ ಮತ್ತು ಸಾಮಾಜಿಕ ಕಾರ್ಯಕರ್ತ. ಬೆಂಗಳೂರಿನ ವಿಜಯನಗರದಲ್ಲಿ ಆಕ್ಟಿವ್ ಹೆಲ್ತ್ ಡಯಾಬಿಟಿಸ್ ಸೆಂಟರ್ ಎಂಬ ಸಂಸ್ಥೆಯನ್ನು ನಡೆಸುತ್ತಾರೆ (ಸಂಪರ್ಕ: 9731440021)


